ದೇವರ ಅರ್ಚಕರು, ಆಸ್ಥಾನದ ನ್ಯಾಯಾಧೀಶರು, ಗೆಳೆಯರು, ಗೆಳೆಯರ ಪತ್ನಿಯರು ಹೀಗೆ ಎಲ್ಲರನ್ನೂ ರಾಜೇಂದ್ರನು ಪ್ರಶ್ನಿಸುತ್ತಾನೆ. ಒಂಟಿ ಪುರುಷರೆಲ್ಲ ಬಗೆಬಗೆಯ ಉತ್ತರ ನೀಡಿದ್ದರು. ಗೆಳೆಯರ ಪತ್ನಿಯರೆಲ್ಲ, 'ಗಂಡನ ಪ್ರಾಮಾಣಿಕ ಪ್ರೀತಿಯನ್ನಲ್ಲದೆ ಮತ್ತೇನನ್ನು ಬಯಸುತ್ತೇವೆ ನಾವು' ಎನ್ನುತ್ತಾ ಪಕ್ಕದಲ್ಲೇ ಇದ್ದ ಗಂಡಂದಿರತ್ತ ನೋಡಿ ಕಿಸಕ್ಕನೆ ನಕ್ಕುಬಿಟ್ಟಿದ್ದರು. ಸರಿಯಾದ ಉತ್ತರವನ್ನು ನಿರ್ಧರಿಸಲಾಗದೆ ರಾಜೇಂದ್ರನು ಗೊಂದಲಗೊಂಡಿದ್ದ. ವಿಧಿಸಲಾದ ಗಡುವು ಹತ್ತಿರವಾಗುತ್ತಿದ್ದಂತೆ ಕಂಗಾಲಾಗಿದ್ದ.

ಗೆಳೆಯನ ಗೊಂದಲಗಳನ್ನು ಗಮನಿಸುತ್ತಿದ್ದ ರಾಜಕುಮಾರನು, ಮುತ್ತುಪ್ಪಾಡಿಯಲ್ಲಿರುವ ಮಾಟಗಾತಿಯನ್ನು ಕರೆಸಿಕೊಂಡು, ಸರಿಯಾದ ಉತ್ತರವನ್ನು ಪಡೆದುಕೊಳ್ಳುವಂತೆ ಸಲಹೆಯ ಜೊತೆಗೆ ಆಕೆಗೆ ಕೊಡಬೇಕಾದ ಹಣದ ಜವಾಬ್ದಾರಿಯನ್ನೂ ವಹಿಸಿಕೊಳ್ಳುತ್ತಾನೆ. ಆದರೆ, ತೀರಾ ಸಾಮಾನ್ಯವಾದ ಪ್ರಶ್ನೆಯೊಂದರ ಉತ್ತರಕ್ಕಾಗಿ ರಾಜಕುಮಾರನ ಸಂಪತ್ತನ್ನು ಕರಗಿಸಲು ಮೊದಮೊದಲು ಹಿಂದೇಟು ಹಾಕಿದ್ದರೂ, ತನ್ನ ಉಳಿವಿಗೆ ಇನ್ನೊಂದೇ ತಿಂಗಳು ಮಾತ್ರ ಬಾಕಿ ಇದೆಯೆಂದಾಗ, ರಾಜೇಂದ್ರ ಮಂಗಳೂರಿನ ರೈಲು ಹತ್ತಿಯೇಬಿಟ್ಟಿದ್ದ. ಮುತ್ತುಪ್ಪಾಡಿಯಿಂದ ಕಣಿಹೇಳುವ ಮಾಟಗಾತಿಯನ್ನು ಕರೆದುಕೊಂಡು ತಿರುವಾಂಕೂರಿಗೆ ಮರಳಿದ್ದ.

ವಿಷಯವನ್ನೆಲ್ಲ ಕೇಳಿಸಿಕೊಂಡ ಮಾಟಗಾತಿಯು, 'ನಿನ್ನ ಪ್ರಶ್ನೆಗೆ ಉತ್ತರಿಸುವೆ. ಆದರೆ, ಪ್ರತಿಯಾಗಿ ನನ್ನ ಮಾತೊಂದನ್ನು ನಡೆಸಿಕೊಡಬೇಕಾಗುತ್ತದೆ' ಎಂಬ ಶರತ್ತು ವಿಧಿಸಿದ್ದಳು. ಆಕೆಯ ಹಣದಾಹದ ಅರಿವಿದ್ದ ರಾಜೇಂದ್ರನು, ಮತ್ತಷ್ಟು ಹಣಕ್ಕೆ ಮಾಟಗಾತಿಯು ಬೇಡಿಕೆಯಿಡಬಹುದೆಂದು ಯೋಚಿಸಿ, ಅವಳ ಶರತ್ತಿಗೆ ಸಮ್ಮತಿಸಿದ್ದ. ಆದರೆ, ಆಕೆಯ ಶರತ್ತು ಕೇಳಿದಾಗ ಅವಾಕ್ಕಾಗಿದ್ದ. 'ನಮ್ಮ ನಡುವೆ ಒಪ್ಪಂದವಾಗಿರುವ ಯಾವ ಹಣವನ್ನೂ ನಾನು ಸ್ವೀಕರಿಸುವುದಿಲ್ಲ. ಆದರೆ, ನನ್ನನ್ನು ಮದುವೆಯಾಗುವಂತೆ ನಿನ್ನನ್ನು ನನ್ನ ಬಳಿಗೆ ಕಳುಹಿಸಿರುವ ರಾಜಕುಮಾರನ ಮನವೊಲಿಸಬೇಕು' ಎಂದುಬಿಟ್ಟಿದ್ದಳು ಆ ಕುರೂಪಿ ಮಾಟಗಾತಿ.

ಅದಾಗಲೇ ಮುದಿಯಾಗಿರುವ, ಬೆಳ್ಳಿ ಕೂದಲಿನ, ಹಳದಿ ಕೋರೆ ಹಲ್ಲುಗಳ, ಕೆಂಪು ಕಣ್ಣುಗಳ, ಇದ್ದಲಿನ ಬಣ್ಣದ, ದುರ್ನಾತ ಬೀರುತ್ತಿರುವ ಗುಡಾಣದಂತಹ ದೇಹದ ಮಾಟಗಾತಿಯನ್ನು ಮದುವೆಯಾಗುವಂತೆ ತನ್ನ ಆತ್ಮೀಯ, ಅದರಲ್ಲೂ ಸುರಸುಂದರನಾಗಿರುವ ರಾಜಕುಮಾರನನ್ನು ಒಲಿಸುವ ಬದಲು ಗಲ್ಲಿಗೇರುವುದೇ ಸೂಕ್ತವೆಂದು ನಿರ್ಧರಿಸಿದ ರಾಜೇಂದ್ರನು, ನ್ಯಾಯಾಲಯದ ಅಧಿಕಾರಿಗಳಿಗೆ ತಾನು ಶರಣಾಗಲು ಬಯಸಿರುವ ಸಂದೇಶ ರವಾನಿಸುತ್ತಾನೆ.

ವಿಷಯ ತಿಳಿದ ರಾಜಕುಮಾರನು, ಗೆಳೆಯನ ಸಜ್ಜನಿಕೆಯನ್ನು ಮೆಚ್ಚಿಕೊಳ್ಳುತ್ತಾನೆ. ಗೆಳೆಯನ ಸಾವಿಗೆ ಹೋಲಿಸಿದರೆ ತನ್ನ ತ್ಯಾಗ ದೊಡ್ಡದಲ್ಲ ಎಂದು ನಿರ್ಧರಿಸಿ ಮಾಟಗಾತಿಯನ್ನು ಮದುವೆಯಾಗಲು ಸಮ್ಮತಿಸುತ್ತಾನೆ.

ಮದುವೆ ಒಪ್ಪಂದ ಪ್ರಕಟವಾಗುತ್ತದೆ.

ರಾಜೇಂದ್ರನ ಪ್ರಶ್ನೆಗೆ ಮಾಟಗಾತಿಯು ಹೀಗೆ ಉತ್ತರಿಸುತ್ತಾಳೆ: 'ಹೆಂಡತಿಯೊಬ್ಬಳು ತನ್ನ ಗಂಡನಿಂದ ನಿಜವಾಗಿ ಬಯಸುವುದು; ತನ್ನನ್ನು ತಾನೇ ಆಳುವ ಹಕ್ಕನ್ನು.'

ರಾಜನಿಗೆ ಸುದ್ದಿ ತಲುಪುತ್ತದೆ. ಮಾಟಗಾತಿಯ ಉತ್ತರದಿಂದ ಸಂಪ್ರೀತನಾಗುವ ಅವನು, ವಾಗ್ದಾನದಂತೆ ಆಪಾದಿತನನ್ನು ಬಿಡುಗಡೆಗೊಳಿಸುತ್ತಾನೆ. ರಾಜಕುಮಾರ ಹಾಗೂ ಮಾಟಗಾತಿಯ ಮದುವೆ ವಿಜೃಂಭಣೆಯಿಂದ ನಡೆಯುತ್ತದೆ.

★★★